# ಮನುಷ್ಯರಾಗುವುದು ಎಂದರೆ

ಮನುಷ್ಯರು ಒಂದು ವಿಶೇಷ ಪ್ರಭೇದಕ್ಕೆ ಸೇರಿದವರಾಗಿದ್ದಾರೆ. ನಾವು ಪ್ರಾಣಿ ಗುಂಪಿಗೆ ಸೇರಿದರೂ ಕೇವಲ ಪ್ರಾಣಿಗಳಲ್ಲ. ಮನುಷ್ಯರ ಮೆದುಳು ಮತ್ತು ಕಂಪ್ಯೂಟರ್‌ಗಳ ನಡುವೆ ಕೆಲವು ಸಾಮಾನ್ಯ ಹೋಲಿಕೆಗಳಿದ್ದಾಗ್ಯೂ ನಾವೇನು ಅತಿ ಸಂಕೀರ್ಣ ಸೂಕ್ಷ್ಮಯಂತ್ರ ಅಥವಾ ಕಂಪ್ಯೂಟರ್‌ಗಳಾಗಿಲ್ಲ. ಕೆಲವು ಪ್ರಾಣಿಗಳಿಗೆ ನಮ್ಮ ರೀತಿಯದೇ ಮೆದುಳು ಮತ್ತು ಅನುವಂಶಿಕ ಸಂಕೇತಗಳಿದ್ದರೂ ಯಾವುದು ಕೂಡಾ ಒಂದೇ ರೀತಿಯ ಮೆದುಳು ಅಥವಾ ಸಂಕೇತಗಳನ್ನು ಹೊಂದಿರುವುದಿಲ್ಲ. ಇನ್ನೂ ಹೇಳಬೇಕೆಂದರೆ, ಪ್ರಾಣಿ ಸಂಶೋಧನಾ ಕ್ಷೇತ್ರದಲ್ಲಿ ಹಲವಾರು ಕುತೂಹಲಕಾರಿ ವಿಚಾರಗಳು ಬೆಳಕು ಕಂಡಿದ್ದರೂ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೆಂದರೆ ಕೆಲವು ಕ್ರಿಯೆಗಳನ್ನು ಮನುಷ್ಯ ಮಾತ್ರ ಮಾಡಬಲ್ಲ, ಪ್ರಾಣಿಗಳಿಗೆ ಅದು ಸಾಧ್ಯವಿಲ್ಲ. ಕಲ್ಪನೆ, ಪ್ರಾಕ್ಕಲ್ಪನೆ, ಮುಂಗಾಣುವಿಕೆ ಮತ್ತು ಸುಳ್ಳು ಇವುಗಳಿಗೆ ಆಸ್ಪದ ವಿರುವಂತ ಭಾಷೆಯನ್ನು ಬಳಸುವ ಸಾಮರ್ಥ್ಯ ಮನುಷ್ಯನಿಗೆ ಮಾತ್ರ ಇದೆ. ಉದಾಹರಣೆಗೆ ವಾಷೂ (ಘಾಭಿಂಜ) ಚಿಂಪಾಂಜಿಗೆ ಕೆಲವು ಸಂಜ್ಞೆಗಳನ್ನು ಗುರುತಿಸಲು ಕಲಿಸಲಾಗಿದೆ. ಅದೇ ರೀತಿ ಬೇರೆ ಪ್ರಾಣಿಗಳು ಕೂಡಾ ತಮ್ಮಗಳ ಮಧ್ಯೆ ಮತ್ತು ನಮ್ಮೊಂದಿಗೆ ಕೆಲವು ರೀತಿಯ ಸಂವಹನ, ಸ್ಪಂದನ ಅಥವಾ ಪ್ರತಿಕ್ರಿಯೆಗಳು ಸಾಧ್ಯವಾಗುವಂತಹ ಸೀಮಿತ ಅರ್ಥದ ಭಾಷಾ ವ್ಯವಸ್ಥೆಗಳಿಸಿಕೊಂಡಿವೆ. ಎಲ್ಲಾ ನಾಯಿ ಮಾಲೀಕರಿಗೂ 'ನಡೆ' ಎಂಬ ಪದವು ನಾಯಿಯಲ್ಲಿ ಎಂಥಾ ಪ್ರತಿಕ್ರಿಯೆ ಸೃಷ್ಟಿಸುತ್ತದೆ ಎಂಬುದು ಗೊತ್ತಿರುತ್ತದೆ. ಆದರೆ ಮನುಷ್ಯನ ಹೊರತಾದ ಪ್ರಾಣಿಗಳಿಗೆ ನೀನು ನನ್ನನ್ನು 'ವಾಕ್'ಗೆ ಕರೆದುಕೊಂಡು ಹೋಗುತ್ತೇನೆಂದು ಭರವಸೆ ಕೊಟ್ಟಿದ್ದಿ, ಆದರೆ ಈಗ ಆ ಭರವಸೆ ನಡೆಸಿಕೊಟ್ಟಿಲ್ಲ' ಎಂಬಂಥಾ ಯೋಚನೆಗಳು ಬಂದಿವೆ ಎಂದು ನಂಬಲು ಯಾವುದೇ ಕಾರಣಗಳಿಲ್ಲ. ಪ್ರಾಣಿಯು ನೋವನ್ನು ಖಂಡಿತವಾಗಿಯೂ ಅನುಭವಿಸುತ್ತದೆ. ಆದರೆ ಅದು 'ನೀನು ನನಗೆ ಹೊಡೆಯುವುದನ್ನು ನಿಲ್ಲಿಸಿದರೆ ಅಥವಾ ನೀನು ನನ್ನ ಸಹೋದರಿಯನ್ನು ವಾಪಸು ಕಳಿಸಿಕೊಟ್ಟರೆ ತುಂಬಾ ಸಂತೋಷವಾಗುತ್ತದೆ' ಎಂಬಂಥಾ ಮಾತುಗಳನ್ನು ನುಡಿಯಲಾರದು. ಅದೇ ರೀತಿ ಕಂಪ್ಯೂಟರ್ ಕೂಡಾ ವೇಗದಲ್ಲಿ ಒಂದು ಹಂತದವರೆಗೆ ಲೆಕ್ಕ ಮಾಡಬಹುದೇ ವಿನಃ 'ನನಗೆ ಈ ಲೆಕ್ಕ ಮಾಡಿ ಸಾಕಾಗಿದೆ ; ಹೀಗಾಗಿ ನಾನು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ನಿಮಗೇನೆನಿಸುತ್ತದೆ, ನೋಡಿ' ಎಂದು ಹೇಳುವುದಿಲ್ಲ.

ಇದಕ್ಕೆ ಕಾರಣ, ನಾವು ಮನುಷ್ಯನ ಆಲೋಚನೆಗಳನ್ನು ಸೂತ್ರರೂಪಕ್ಕೆ ತರುವಂತಹ ಕಂಪ್ಯೂಟರ್‌ಗಳನ್ನು ಇನ್ನೂ ರೂಪಿಸಿಲ್ಲ ಅಥವಾ ಮನುಷ್ಯನ ಹೊರತಾದ ಪ್ರಾಣಿಗಳು ಸಂಕೀರ್ಣತೆಯಿಂದ ಕೂಡಿದ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿಲ್ಲವೆಂದಲ್ಲ. ನಮಗೆ ಗೊತ್ತಿರುವ ಮಟ್ಟಿಗೆ ಬೇರೆ ಯಾವ ಪ್ರಾಣಿಗೂ ನಮ್ಮ ರೀತಿಯಂತೆ ಭಾಷೆಯನ್ನು ಬಳಸಲು ಸಾಧ್ಯವಾಗುವುದಿಲ್ಲ. ಅಲ್ಲದೆ

ಕಂಪ್ಯೂಟರ್‌ಗಳು ತಾಂತ್ರಿಕವಾಗಿ ಎಷ್ಟೇ ಮುಂದಿದ್ದರೂ ಅವು ಕೇವಲ ಲೆಕ್ಕ ಮಾಡುವ ತಾಂತ್ರಿಕ ವ್ಯವಸ್ಥೆಯುಳ್ಳ ಯಂತ್ರಗಳೇ ವಿನಃ ಮಾನವನ ಹಾಗೆ ಅವುಗಳಿಗೆ ಭಾಷೆಯನ್ನು ಬಳಸಲು ಬರುವುದಿಲ್ಲ. (ಅವುಗಳ ಬಗ್ಗೆ ಹೇಳುತ್ತಿರುವಾಗ ಮನುಷ್ಯನ ಪರಿಭಾಷೆ ಬಳಸಿ ಈ ವಿಷಯವನ್ನು ಸ್ವಲ್ಪ ಗೊಂದಲ ಮಾಡುತ್ತಿರುವ ಸಂಭವ ಇದೆ).

ಹೀಗೆ ಹೇಳುವುದರಿಂದ ಮೆದುಳು, ಕೃತಕ ಬುದ್ಧಿಮತ್ತೆ, ಕಂಪ್ಯೂಟರ್‌ಗಳು ಮತ್ತು ಪ್ರಾಣಿಗಳ ಮೇಲೆ ಇತ್ತೀಚಿನ ವರ್ಷಗಳಲ್ಲಿ ನಡೆಸಿರುವ ಅಧ್ಯಯನಗಳನ್ನು ಕೀಳಾಗಿ ಕಾಣುತ್ತೇವೆಂದಾಗಲೀ ಅಥವಾ ಅವುಗಳನ್ನು ಪ್ರಶ್ನಿಸುತ್ತೇವೆಂದಾಗಲೀ ಅಲ್ಲ. ಸರಳವಾಗಿ ಹೇಳುವುದಾದರೆ, ಮನುಷ್ಯ ಒಂದು ಅನನ್ಯ ಪ್ರಾಣಿ ಎಂಬುದನ್ನು ಈ ಸಂಶೋಧನೆಯು ಕಾಲದಿಂದ ಕಾಲಕ್ಕೆ ತೋರಿಸುತ್ತಿದೆ. ಮನುಷ್ಯ ಮತ್ತು ಮನುಷ್ಯರಲ್ಲದವರಲ್ಲಿರುವ ಮೆದುಳುಗಳು, ಕೃತಕ ಬುದ್ಧಿಮತ್ತೆ ಮತ್ತು ಮನುಷ್ಯನ ಬುದ್ಧಿವಂತಿಕೆ, ಕಂಪ್ಯೂಟರ್‌ಗಳು ಮತ್ತು ಮನುಷ್ಯರು, ಪ್ರಾಣಿಗಳು ಮತ್ತು ನಮ್ಮ ಮಧ್ಯೆ ಎಷ್ಟೇ ಸಾಮ್ಯತೆ ಅಥವಾ ಹೋಲಿಕೆ ಇದ್ದಾಗಲೂ ಈ ಒಂದು ಅನಿವಾರ್ಯ ವ್ಯತ್ಯಾಸ ಇದ್ದೇ ಇದೆ : ಅದೆಂದರೆ ಅನನ್ಯ ಬಗೆಯ ಭಾಷೆಯನ್ನು ಬಳಸುವ ಸಾಮರ್ಥ್ಯ. ಶೈಕ್ಷಣಿಕ ದೃಷ್ಟಿಕೋನದಿಂದ ಇದನ್ನು ತಪ್ಪು ಎಂದು ಹೇಳುವುದಾದರೆ, ಉದಾಹರಣೆಗೆ ಇನ್ನೊಂದು ಪ್ರಾಣಿ ಪ್ರಭೇದಕ್ಕೆ ಈ ಸಾಮರ್ಥ್ಯವಿಲ್ಲವೆಂದು ಕಂಡು ಬಂದರೆ ಅಥವಾ ಇನ್ನೊಂದು ಪರಿಚಿತ ಪ್ರಭೇದ ಈ ಸಾಮರ್ಥ್ಯವನ್ನು ಬೆಳಸಿಕೊಂಡರೆ ಅಥವಾ ಕಂಪ್ಯೂಟರ್ ಅದನ್ನು ಪಡೆದುಕೊಂಡರೆ ಪ್ರಾಣಿಯಾಗಲಿ, ಕಂಪ್ಯೂಟರ್ ಆಗಲಿ ಆಗ, ಈ ದೃಷ್ಟಿಯಲ್ಲಿ, 'ಮನುಷ್ಯ' ಆಗುತ್ತದೆ. ಹೀಗಾದಾಗ ಅವುಗಳಿಗೆ ಶಾಲೆಗೆ ಹೋಗುವ ಅವಶ್ಯಕತೆ ಇದೆ. ಯಾಕೆಂದರೆ ಮನುಷ್ಯರಿಗಿರುವ ವಿಶಿಷ್ಟ ಭಾಷೆಯ ಬಳಕೆಯ ಸಾಮರ್ಥ್ಯವು ಶಿಕ್ಷಣದ ಸಾಧ್ಯತೆಯ ಪ್ರಧಾನ ಅಂಶವಾಗಿದೆ. ನೀವು ಒಂದು ಯಂತ್ರವನ್ನು ಸೃಷ್ಟಿಸಬಹುದು ಅಥವಾ ಅದರ ತಾಂತ್ರಿಕ ಯೋಜನೆಯನ್ನು ತಯಾರಿಸಬಹುದು, ಅದೇ ರೀತಿ ಒಂದು ಕೋತಿಗೆ ತರಬೇತಿ ನೀಡಬಹುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಭಾಷೆಯನ್ನು ಪರಿಕಲ್ಪಿಸಿಕೊಳ್ಳುವ ಸಾಮರ್ಥ್ಯವಿರುವ ಮನುಷ್ಯನಿಗೆ ಮಾತ್ರ ಶಿಕ್ಷಣವನ್ನು ನೀಡಬಹುದಾಗಿದೆ.

ನಮಗೆ ಭೌತಿಕ ದೇಹವಿದ್ದು ಅದನ್ನು ವೈಜ್ಞಾನಿಕವಾಗಿ ವಿವರಿಸಬಹುದು ಮತ್ತು ಅಧ್ಯಯನ ಮಾಡಬಹುದು ಎನ್ನುವ ಅರ್ಥದಲ್ಲಿ ನಾವೆಲ್ಲರೂ ಪ್ರಾಣಿಗಳೇ ಆಗಿದ್ದೇವೆ. ನಮಗೆ ಮೆದುಳು ಇದ್ದು ಅದು ಭೌತಿಕವಾಗಿರುವುದರಿಂದಾಗಿ ಕಾರಣ ಮತ್ತು ಪರಿಣಾಮಗಳ ಪರಿಭಾಷೆಯಲ್ಲಿ ಅದನ್ನೂ ವೈಜ್ಞಾನಿಕವಾಗಿ ಅಧ್ಯಯನ ಮಾಡಬಹುದು ಮತ್ತು ವಿವರಿಸಬಹುದು. ಕೆಲವು ಪ್ರಾಣಿಗಳಿಗೆ ಹೋಲಿಸಿದರೆ ನಮ್ಮ ಮೆದುಳು

ಸ್ವಲ್ಪ ಮಾತ್ರ ಭಿನ್ನವಾಗಿದೆ. ಅಂದರೆ ನಮ್ಮ ವಿಶಿಷ್ಟತೆಯು ನಮ್ಮ ಮೆದುಳಿನಲ್ಲಿದೆ ಎನ್ನುವುದು ಸರಿಯಾಗಲಾರದು. ಮೆದುಳಿನ ಕೆಲವು ಭಾಗಗಳನ್ನು ಕೆಲವು ರೀತಿಯ ಚಟುವಟಿಕೆಗಳೊಂದಿಗೆ ಗುರುತಿಸುತ್ತೇವೆ ಎಂಬುದನ್ನು ಸಹಾ ಒಪ್ಪಿಕೊಳ್ಳಬೇಕು. ಆದರೆ ನಾವು ಇಲ್ಲಿ ಅವಶ್ಯಕ ಮತ್ತು ತಕ್ಕುದಾದ ಸ್ಥಿತಿ ಮಧ್ಯ ಇರುವ ಒಂದು ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ ಮೆದುಳಿನ ಒಂದು ಭಾಗಕ್ಕೂ ಸೃಜನಾತ್ಮಕ ಚಟುವಟಿಕೆಗೂ ಸಂಬಂಧವಿದೆ ಎಂಬುದನ್ನು ವಿಜ್ಞಾನ ದೃಢಪಡಿಸಿದೆ. ಇದರರ್ಥ ಏನೆಂದರೆ ಮೆದುಳಿನ ಈ ಭಾಗ ಸರಿಯಾಗಿ ಕೆಲಸ ಮಾಡದಿದ್ದರೆ ವ್ಯಕ್ತಿಯ ಸೃಜನಶೀಲತೆ ಹೊರ ಹೊಮ್ಮಲು ಸಾಧ್ಯವಿಲ್ಲ. ಹೀಗಾಗಿ ವ್ಯಕ್ತಿಯ ಸೃಜನಶೀಲತೆಗೆ ಇದೊಂದು ಅವಶ್ಯಕ ಸ್ಥಿತಿ ಆಗಿದೆ. ಆದರೆ ಮೆದುಳಿನ ಈ ಭಾಗವು ಸುಸ್ಥಿತಿಯಲ್ಲಿದೆಯೆಂದ ಮಾತ್ರಕ್ಕೆ ಅದು ಸೃಜನಶೀಲತೆಯನ್ನು ಹುಟ್ಟಿಸುತ್ತದೆಯೆನ್ನುವುದು ಈ ಹೇಳಿಕೆಯ ಅರ್ಥವೂ ಅಲ್ಲ; ಅದು ಸಮಂಜಸವೂ ಅಲ್ಲ. ಸೃಜನಶೀಲವಾಗಿರುವುದೆಂದರೆ ಮೆದುಳಿನ ಒಂದು ಭಾಗ ಕೆಲಸ ಮಾಡುತ್ತಿದೆ ಎನ್ನುವುದಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆ. ಒಬ್ಬ ಶ್ರೇಷ್ಠ ಟೆನ್ನಿಸ್ ಆಟಗಾರ್ತಿಯ ಆಟದ ಗುಣಮಟ್ಟ ಮತ್ತು ಆಟದ ಶೈಲಿಯನ್ನು ಅವಳ ದೈಹಿಕ ಚಲನವಲನಗಳ ವಿವರಣೆಯಿಂದ ಹೇಗೆ ಹಿಡಿಯಲಾಗುವುದಿಲ್ಲವೋ ಹಾಗೆಯೇ ಸೃಜನಶೀಲತೆಯ ಕಲ್ಪನೆಯನ್ನು ಕೇವಲ ಮೆದುಳಿನ ಸಂಪೂರ್ಣ ವಿವರಣೆಯಿಂದಲೂ ಹಿಡಿಯಲು ಸಾಧ್ಯವಿಲ್ಲ.

ನಾವೆಲ್ಲಾ ಅನುವಂಶೀಯ ಗುಣಗಳನ್ನು ದತ್ತವಾಗಿ ಪಡೆದ ವ್ಯಕ್ತಿಗಳಾಗಿದ್ದೇವೆ. ಇತ್ತೀಚಿನ ಪುರಾವೆಗಳ ಪ್ರಕಾರ, ವಿಶಿಷ್ಟ ಮನುಷ್ಯರಾಗಿರುವುದಕ್ಕೆ ಈ ವೈಯುಕ್ತಿಕ ಅನುವಂಶೀಯ ಬಳುವಳಿಗೆ ಹೆಚ್ಚು ಋಣಿಯಾಗಿದ್ದೇವೆ. ಆದರೆ ನಾವು ಕೇವಲ ಈ ಕೊಡುಗೆಯ ಉತ್ಪನ್ನಗಳಲ್ಲ ಮತ್ತು ಅದರಿಂದ ನಿರ್ಧರಿತರಾದವರೆಂದೂ ತಿಳಿಯಬಾರದು. ನಮ್ಮ ಅನುವಂಶೀಯ ಗುಣಗಳು ಅನುಭವಗಳಿಂದ ಪರಿಶುದ್ಧಗೊಳ್ಳುತ್ತವೆ ಮತ್ತು ಮಾರ್ಪಾಡಾಗುತ್ತವೆ. ಸ್ವಭಾವ ಅಥವಾ ಪೋಷಣೆ, ನಮ್ಮೊಳಗಿರುವ ಸ್ವಂತಿಕೆ ಅಥವಾ ಪರಿಸರ – ಇವುಗಳಲ್ಲಿ ಯಾವುದು ನಾವು ಯಾರು ಎಂಬುದನ್ನು ನಿರ್ಧರಿಸುತ್ತದೆ ಎಂಬ ಗ್ರೀಕ್‌ರ ಬಹು ಚರ್ಚಿತ, ಪುರಾತನ ಪ್ರಶ್ನೆಗೆ ಉತ್ತರ ಎರಡೂ ಹೌದು. ನಮಗೆ ದಕ್ಕಿರುವ ಸ್ವಭಾವವು ವಿಶೇಷ ಪೋಷಣೆಯಿಂದಾಗಿ ನಿರ್ದಿಷ್ಟ ರೀತಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಕೇವಲ ನಮ್ಮ ವಂಶವಾಹಿನಿಗಳಿಂದ ನಾವೇನು ಎಂಬುದು ನಿರ್ಧಾರವಾಗುವುದಿಲ್ಲ. ಅವು ನಾವು ಯಾರಾಗುತ್ತೇವೆ ಎನ್ನುವುದಕ್ಕೆ ಮಿತಿಯನ್ನು ಹಾಕುವ ಸತ್ವಗಳು ಅಥವಾ ಪ್ರವೃತ್ತಿಗಳು ಮಾತ್ರ. ಆದರೆ ಅವುಗಳು ನಿರ್ದಿಷ್ಟತೆಗಳನ್ನು ಆತ್ಯಂತಿಕವಾಗಿ ನಿರ್ಧರಿಸುವುದಿಲ್ಲ. ಸರಳ ಉದಾಹರಣೆ ಕೊಡುವುದಾದರೆ, ನಾನು ಅನುವಂಶೀಯವಾಗಿ ಒಂದು ರೀತಿಯ ಬೌದ್ಧಿಕ ಜೀವನ ಶೈಲಿಯನ್ನು ಇಷ್ಟಪಡಬಹುದು. ಆದರೆ

ಭಿನ್ನವಾಗಿ ಇರುವ ನನ್ನ ಸ್ನೇಹಿತ ಎಂದೂ ಯಶಸ್ವಿಯಾಗಿ ಮತ್ತು ಸಂತೋಷವಾಗಿ ಬೌದ್ಧಿಕ ಬದುಕನ್ನು ನಡೆಸದೇ ಇರಬಹುದು. ಈ ಅರ್ಥದಲ್ಲಿ ನಾವಿಬ್ಬರೂ ತಮ್ಮ ವಂಶಾವಳಿಯ ಕಾರಣದಿಂದಾಗಿ ಸ್ವಲ್ಪ ಮಟ್ಟಿಗೆ ಭಿನ್ನರಾಗಿದ್ದೇವೆ. ಬೌದ್ಧಿಕ ಜೀವನಕ್ರಮ ಮುಂದುವರೆಸುವುದನ್ನು ಬಿಟ್ಟು ನನಗೆ ಬೇರೆ ಏನೂ ಮಾಡಲಿಕ್ಕಾಗುವುದಿಲ್ಲ ಎಂದು ಹೇಳಲಾಗದು. ಅನುವಂಶೀಯ ಆಸಕ್ತಿಗಳನ್ನೇ ಬೆನ್ನು ಹತ್ತಿ ಅದನ್ನೇ ಬೆಳಸುವ ಅವಕಾಶ ನನಗೆ ದೊರೆಯದೇ ಇರಬಹುದು.

ನಾವು ಈಗ ಮುಖ್ಯ ವಿಷಯಕ್ಕೆ ಮತ್ತೇ ಬರೋಣ. ಮನುಷ್ಯ ಮತ್ತು ಮನುಷ್ಯ ಮಾತ್ರ ವಿಶಿಷ್ಟ ಬಗೆಯ ಭಾಷೆಯ ಸಾಮರ್ಥ್ಯವನ್ನು ಅನುವಂಶೀಯವಾಗಿ ಪಡೆದವನಾಗಿದ್ದಾನೆ. ಈ ಸಾಮರ್ಥ್ಯದಿಂದಾಗಿ ಸತ್ಯ, ಸುಳ್ಳು ಅಥವಾ ಕಾಲ್ಪನಿಕವಾಗಿರಬಹುದಾದ ಪ್ರತಿಪಾದನೆಗಳನ್ನು ರೂಪಿಸುವ ಮತ್ತು, ಇವುಗಳ ಮುಂದುವರಿಕೆಯ ಭಾಗವಾಗಿ, ಭರವಸೆ ಕೊಡುವ, ಕಲ್ಪಿಸುವ ಮತ್ತು ಪ್ರಾಕ್ಕಲ್ಪಿಸುವ ಗುಣ ಮನುಷ್ಯನಿಗೆ ಬಂದಿರುತ್ತದೆ. ಇದರಿಂದ ಜಗತ್ತನ್ನು ವಿವರಿಸುವ, ಅದರ ಬಗ್ಗೆ ಮುಂದಾಲೋಚಿಸುವ ಮತ್ತು ಅದನ್ನು ನಿಯಂತ್ರಿಸುವ ಶಕ್ತಿ ಕೂಡಾ ಮನುಷ್ಯನಿಗೆ ಬಂದಿದೆ. ಈ ಗುಣಗಳೇ ನಾವು ಯಾರು ಎಂಬುದನ್ನು ರೂಪಿಸುತ್ತವೆ. ಅದೇ ರೀತಿ ಮನುಷ್ಯನನ್ನು ವ್ಯಾಖ್ಯಾನಿಸುವ ಹಲವಾರು ವಿಧಾನಗಳು ಪ್ರಚಲಿತದಲ್ಲಿವೆ : ಧಾರ್ಮಿಕ ದೃಷ್ಟಿಯಿಂದಾದರೆ, ಮನುಷ್ಯ ಮತ್ತು ಆತ್ಮದ ಸಂಬಂಧಗಳ ಮುಖಾಂತರ, ವೈಜ್ಞಾನಿಕ ದೃಷ್ಟಿಕೋನದಿಂದಾದರೆ, ಕೇವಲ ಶರೀರ ವಿಜ್ಞಾನದ ಶಬ್ಧಗಳಲ್ಲಿ ವಿವರಿಸಬಹುದು. ಹೀಗಾಗಿ ಇದನ್ನು ನಾನು ಮನುಷ್ಯನನ್ನು ವ್ಯಾಖ್ಯಾನಿಸುವ ಒಂದೇ ಮಾರ್ಗವೆಂದು ಹೇಳುತ್ತಿಲ್ಲ. ಆದರೆ ಇದು ಮನುಷ್ಯರಲ್ಲಿ ಎದ್ದು ಕಾಣುವ ವಿಶೇಷ ಗುಣ ಲಕ್ಷಣ ಎಂಬುದೂ ಅಷ್ಟೇ ಸತ್ಯ ಮತ್ತು ಇದಕ್ಕಿಂತಾ ಮಹತ್ವಪೂರ್ಣವಾದದ್ದನ್ನು ಯೋಚಿಸುವುದು ಕಷ್ಟವಾಗುತ್ತದೆ.

ಬೇರೆ ಪ್ರಾಣಿಗಳ ಸಂವಹನ ವ್ಯವಸ್ಥೆಗಳ ಜೊತೆಗೆ ಮನುಷ್ಯರದ್ದು ಹೋಲಿಸಿದರೆ ನಮ್ಮ ಭಾಷೆಯ ಗುಣಲಕ್ಷಣಗಳು ಜಗತ್ತನ್ನು ಅರಿಯಲು ಮತ್ತು ವಿವರಿಸಲು ನಮಗೆ ಹೆಚ್ಚು ಸಾಮರ್ಥ್ಯ ಕೊಟ್ಟಿವೆ. ಆದರೆ ಶತಮಾನಗಳಿಂದ ನಾವು ಬೆಳಸಿಕೊಂಡ ತಿಳವಳಿಕೆ ಮತ್ತು ಒಳನೋಟಗಳ ದಿಗಿಲು ಹುಟ್ಟಿಸುವ ಸಂಬಂಧಗಳಿಂದಾಗಿ ಹಿಂದೆ ವ್ಯಕ್ತಪಡಿಸಿದ ಸತ್ಯಗಳು ಈಗ ನಮ್ಮನ್ನು ನಿರ್ದೇಶಿಸುತ್ತವೆ ಮತ್ತು ನಿಯಂತ್ರಿಸುತ್ತಿವೆ. ಉದಾಹರಣೆಗೆ, ಮೂಲ ಸಂಖ್ಯೆಗಳು ಕೆಲವು ಲಕ್ಷಣಗಳನ್ನು ಹೊಂದಿರುತ್ತವೆ ; ನಾವು ಅವುಗಳನ್ನು ಏನೂ ಮಾಡುವಂತಿಲ್ಲ ; ಬದಲಾಯಿಸುವ ಹಾಗೂ ಇಲ್ಲ. ಅವುಗಳಿಗೆ ಅವುಗಳದ್ದೇ ಆದ ಲಕ್ಷಣಗಳಿರುತ್ತವೆ. ಅಲ್ಲದೆ ಎಂತಹಾ ವಾದ ಸರಣಿಗಳನ್ನು ನಾವು ಒಪ್ಪಿಕೊಂಡಿದ್ದೇವೆ ಅಂದರೆ ಎಲ್ಲ ಮನುಷ್ಯರೂ ಮರ್ತ್ಯರೇ, ಸಾಕ್ರಟೀಸ್ ಒಬ್ಬ ಮನುಷ್ಯ, ಹೀಗಾಗಿ ಸಾಕ್ರಟೀಸ್ ಕೂಡಾ ಮರ್ತ್ಯ ಎಂಬ

ತರ್ಕ ಕೂಡಾ ನ್ಯಾಯ ಸಮ್ಮತವೇ ಆಗಿದೆ. (ಅದರೆ ಎಲ್ಲ 'ಂ' ಗಳು 'ಃ' ಆಗಿದೆ ; 'ಅ' ಕೂಡಾ 'ಂ' ಆಗಿದೆ, ಹೀಗಾಗಿ 'ಅ' ಕೂಡಾ 'ಃ' ಆಗಿದೆ ಎನ್ನುವ ತರ್ಕಸರಣಿಯಂತೆ). ಈ ವಾದ ಮುಂದುವರೆಸಿ, 'ಎಲ್ಲ ಹಸುಗಳೂ ನಾಲ್ಕು ಕಾಲು ಹೊಂದಿವೆ ; ಇದಕ್ಕೂ ನಾಲ್ಕು ಕಾಲಿದೆ, ಹೀಗಾಗಿ ಇದು ಕೂಡಾ ಒಂದು ಹಸು. (ಎಲ್ಲ 'ಂ' ಗಳೂ 'ಃ' ಆಗಿವೆ ; ಇದು 'ಃ' ಆಗಿದೆ, ಹೀಗಾಗಿ ಇದು ಕೂಡಾ 'ಂ' ಆಗಿದೆ) ಈ ರೀತಿಯ ತರ್ಕವನ್ನು ಒಪ್ಪಲಾಗುವುದಿಲ್ಲ. ನಾವು 'ಕಂಡುಹಿಡಿದೆವು' ಅಥವಾ ಸಂಶೋಧಿಸಿದೆವು ಎಂದು ಹೇಳಬಹುದು. ಆದರೆ ಇದು ಹೀಗೆ ಇರಬೇಕು ಎಂದು ನಾವು ಒಪ್ಪಿಕೊಳ್ಳುತ್ತೇವೆ ಎನ್ನುವುದನ್ನು ಅಲ್ಲಗಳೆಯಲಾಗದು. ಆದ್ದರಿಂದ ನಾವು ಈಗಾಗಲೇ ಅರ್ಥ ಮಾಡಿಕೊಂಡಿರುವುದನ್ನೂ ಬದಲಾಯಿಸಲಾಗುವುದಿಲ್ಲ. ಹೀಗಾಗಿ ಇಲ್ಲಿಯೂ ಕೂಡಾ ಮೊದಲೇ ಬೆಳಸಿಕೊಂಡ ಜ್ಞಾನಕ್ಕೆ ನಾವು ಅಧೀನರಾಗಿರುತ್ತೇವೆ.

ಮನುಷ್ಯ ವೈಚಾರಿಕತೆಗೆ ಯಾವಾಗಲೂ ಸ್ಪಂದಿಸುತ್ತಾನೆ ಮತ್ತು ಅದನ್ನು ವಿಶಿಷ್ಟವಾಗಿ ಬಳಸಿಕೊಳ್ಳುತ್ತಾನೆ. ಮೂಲತಃ ನಾವೆಲ್ಲರೂ ಪ್ರಾಣಿ ವರ್ಗಕ್ಕೆ ಸೇರಿರುವುದರಿಂದ ಪ್ರಚೋದನೆ – ಪ್ರತಿಕ್ರಿಯೆಗಳಿಗೆ ತಕ್ಕಂತೆ ವರ್ತಿಸುತ್ತೇವೆ. ಆದರೂ ನಮ್ಮ ಮುಖ್ಯ ಲಕ್ಷಣ ಬುದ್ಧಿಶಕ್ತಿಯನ್ನು ಉಪಯೋಗಿಸುವುದು. ನಮ್ಮ ಮನಸ್ಸು ಮೆದುಳಿಗಿಂತಾ ಭಿನ್ನವಾಗಿರುವುದೇ ನಮ್ಮ ಮೂಲ ಗುಣ. (ಮನಶಾಸ್ತ್ರ ಮತ್ತು ತತ್ವಶಾಸ್ತ್ರಗಳಂತಹಾ ಶಿಸ್ತುಗಳಲ್ಲಿ 'ಮನಸ್ಸು' ಮತ್ತು 'ಮೆದುಳು' ಶಬ್ಧಗಳ ಬಳಕೆ ಬಗ್ಗೆ ದುರದೃಷ್ಟವಶಾತ್ ಖಚಿತವಾದ ಒಂದೇ ಮಾದರಿ ಇಲ್ಲ. ಅವುಗಳ ಮಧ್ಯೆ ಗಮನಿಸಬೇಕಾಗಿರುವ ಮುಖ್ಯ ವ್ಯತ್ಯಾಸವೆಂದರೆ : ಬುದ್ಧಿಶಕ್ತಿಯ ಹಲವಾರು ರೂಪಗಳಿಗೆ ಅವಶ್ಯಕವಾಗಿರುವ ಆದರೆ ಅದರ ಜೊತೆ ಗುರುತಿಸಿಕೊಳ್ಳಬಾರದ ಜೈವಿಕ ಅಂಗವಾದ 'ಮೆದುಳು' ಮತ್ತು ವಿಶಾಲವಾದ ಅರ್ಥದಲ್ಲಿ, ಯಾವುದನ್ನು ನಿಜವಾದ ಬೌದ್ಧಿಕ ಸಾಮರ್ಥ್ಯದ ಅಮೂರ್ತರೂಪ ಎಂದು ಹೇಳಬಹುದಾದ 'ಮನಸ್ಸು'. ಸ್ಪಷ್ಟವಾಗಿ ಹೇಳಬೇಕೆಂದರೆ, ನಿಮಗೆ ಮೆದುಳಿಲ್ಲ ಅಂದರೆ ನಿಮಗೆ ಮನಸ್ಸು ಇರುವುದಿಲ್ಲ. ಆದರೆ ಮೆದುಳು ಇದ್ದಾಕ್ಷಣ ಪೂರ್ತಿ ಸರಿಯಾದ ಮನಸ್ಸಿನ ಎಲ್ಲಾ ಅಂಶಗಳು ಇವೆ ಎನ್ನುವುದಕ್ಕೆ ಯಾವ ಭರವಸೆಯೂ ಇಲ್ಲ).

ನಾವೆಲ್ಲಾ 'ಸ್ವಾಯತ್ತ' ಎಂದುಕೊಂಡಿರುವ ಮತ್ತು ಅದನ್ನೇ 'ಸ್ವತಂತ್ರ' ಎಂದು ಹೇಳಬಹುದಾದ 'ಮನಸ್ಸು'ಗಳಿವೆ. ಈ ಮನಸ್ಸಿನ ಸ್ವಾಯತ್ತತೆ ನಿರ್ಜೀವ ಅಥವಾ ಜೀವಂತ ಮನುಷ್ಯರು ಅಥವಾ ಬಾಹ್ಯಶಕ್ತಿಗಳ ನಿಯಂತ್ರಣಕ್ಕೊಳಪಡದೇ ತನ್ನದೇ ಆದ ಸ್ವನಿರ್ದೇಶನ ಅಥವಾ ಸ್ವನಿಯಂತ್ರಣಕ್ಕೆ ಒಳಪಟ್ಟಿದೆ. ಆದರೆ ಬೇರೆ ಪ್ರಾಣಿಗಳ ಹಲವಾರು ಪ್ರಚೋದನೆಗಳಿಗೆ ಸ್ವಲ್ಪವೇ ಪ್ರತಿಸ್ಪಂದನೆಗಳಿರುತ್ತವೆ. ಹೀಗಾಗಿ

ಅವುಗಳು ಪರಿಸ್ಥಿತಿಗಳ ನಿಯಂತ್ರಣಕ್ಕೊಳಪಟ್ಟಿರುತ್ತವೆ. ನಾವು ಕೂಡಾ ಬಹಳಷ್ಟು ಸಾರಿ ಹೀಗೇ ವರ್ತಿಸುತ್ತೇವೆ. ವ್ಯತ್ಯಾಸವೆಂದರೆ ನಮ್ಮ ಬುದ್ಧಿಶಕ್ತಿ ಬಳಸಿ ಪ್ರತಿಕ್ರಿಯೆಯನ್ನು ತೋರುವ ಸಾಮರ್ಥ್ಯವೂ ನಮಗೆ ಇದೆ ಮತ್ತು ಹೀಗೆ ಮಾಡುವಲ್ಲಿ ಪರಿಸ್ಥಿತಿಗೆ ಸ್ಪಂದಿಸುವ ಬದಲು ನಾವು ಅದನ್ನು ನಿಯಂತ್ರಿಸುತ್ತಿರುತ್ತವೆ. ಹೀಗಾಗಿ ನಾವು 'ಸಂದರ್ಭದ ಬಲಿಪಶು' ಆಗದೇ ಆದರಿಂದ ಮುಕ್ತರಾಗಿರುತ್ತೇವೆ. (ನಾವು ಇಲ್ಲಿ, ಸಾಂಪ್ರದಾಯಕವಾಗಿ ಯೋಚಿಸುವಂತೆ, ಮುಕ್ತ ಮನಸ್ಸು ಮತ್ತು ನಿಯತಿವಾದಗಳ ಬಗ್ಗೆ ಮಾತನಾಡುತ್ತಿಲ್ಲ. ಆಂದರೆ ಮೊದಲನೆಯದಾಗಿ ಮತ್ತು ಚಾರಿತ್ರಿಕವಾಗಿ, ಕೆಲವು ಧಾರ್ಮಿಕ ನಂಬಿಕೆಗಳಿಗೆ ಇದೊಂದು ಸಮಸ್ಯೆಯಾಗಿದೆ. ದೇವರು ಸರ್ವಜ್ಞ ಎಂದು ಕೊಂಡರೆ, ಮುಂದೇನಾಗುತ್ತದೆ ಎಂಬುದೂ ಅವನಿಗೆ ಗೊತ್ತಿರುತ್ತದೆ ಎಂದ ಹಾಗಾಯಿತು. ಹಾಗಿದ್ದಾಗ ನಾನು ಯಾವ ಅರ್ಥದಲ್ಲಿ 'ಆಯ್ಕೆ' ಮಾಡಿಕೊಳ್ಳುತ್ತೇನೆ ಎಂದು ಹೇಳಲು ಸಾಧ್ಯ? ಇದೊಂದು ಕುತೂಹಲದ ಒಗಟಾಗಿರುವ ಸನ್ನಿವೇಶವಾಗಿರಬಹುದಾದರೂ ಇದನ್ನು ಇಲ್ಲಿಗೇ ಬಿಡೋಣ.) ಮೇಲಿನ ವಾದವೆಂದರೆ, ನಾವು ಜೈವಿಕವಾಗಿ ಅನುವಂಶೀಯ ಗುಣಗಳಿಂದ ರೂಪಗೊಂಡಿದ್ದೇವೆ ಎಂಬುದು ಸ್ವಲ್ಪ ಮಟ್ಟಿಗೆ ಸರಿ ಇದ್ದರೂ, ಬೇರೆಯವರ ಅಂಕುಂಶಕೊಳಗಾಗದೇ ನಮ್ಮದೇ ಸ್ವನಿರ್ದೇಶನದಿಂದ ಒಳಮನಸ್ಸಿನ ಭಾವನೆಗಳಿಗೆ ತಕ್ಕಂತೆ ನಡೆಯುತ್ತಿದ್ದೇವೆ ಎಂಬ ಅರ್ಥದಲ್ಲಿ ನಾವು ಸ್ವಾಯತ್ತರಾಗಿದ್ದೇವೆ.

ವಂಶವಾಹಿನಿಗಳನ್ನು ಈಗ ಅರ್ಥಮಾಡಿಕೊಂಡಿರುವ ಬಗ್ಗೆ ಇನ್ನೊಂದು ಮಾತು ಹೇಳಬೇಕು ನಾವು ಅನುವಂಶೀಯ ಗುಣ ಲಕ್ಷಣಗಳನ್ನು ಪಡೆದವರಾದ್ದರಿಂದ ಮತ್ತು ವೈಯಕ್ತಿಕ ವಂಶವಾಹಿನಿ ಗುಣಗಳಲ್ಲಿ ಹೆಚ್ಚು ಹೋಲಿಕೆಗಳಿರುವುದರಿಂದ ಮನುಷ್ಯರೆಲ್ಲರೂ ವಾಸ್ತವದಲ್ಲಿ ಒಂದೇ ರೀತಿಯಲ್ಲಿದ್ದೇವೆ, ಹೀಗಾಗಿ ಅಲ್ಲಿ ವ್ಯಕ್ತಿ ವಿಶಿಷ್ಟತೆಗೆ ಯಾವುದೇ ಅವಕಾಶವಿರುವುದಿಲ್ಲ ಎಂದು ಹೇಳುವ ವಾದ ಸತ್ಯವಲ್ಲ. ಪ್ರತಿಯೊಬ್ಬ ವ್ಯಕ್ತಿಗಳಲ್ಲಿರುವ ಒಂದೊಂದು ಡಿ. ಎನ್. ಎ.ಗಳ ವ್ಯತ್ಯಾಸ ಸರಾಸರಿ ಶತಕಕ್ಕೆ 0.1ರಷ್ಟು ಇದೆ ಎಂದು ಪರಿಗಣಿಸಿದಾಗ್ಯೂ ಇಲ್ಲಿ ಏನು ಸ್ಪಷ್ಟವಾಗುತ್ತದೆ ಎಂದರೆ ಪ್ರತಿಯೊಬ್ಬರ ಡಿ.ಎನ್.ಎ. ಮತ್ತು ಅದರ ವಿಶಿಷ್ಟ ಪರಿಸರಗಳ ಪರಸ್ಪರ ಪ್ರಭಾವದಿಂದಾಗಿ ಪ್ರತಿಯೊಬ್ಬ ವ್ಯಕ್ತಿಗಳ ನಡುವೆ ಅಳಿಸಲಾಗದ ವ್ಯತ್ಯಾಸವು ಇದ್ದೇ ಇರುತ್ತದೆ. ನಮ್ಮ ವೈಯಕ್ತಿಕ ವಿಶಿಷ್ಟತೆಯನ್ನು ತಳಿಶಾಸ್ತ್ರ ವಿವರಿಸುತ್ತದೆ ಮತ್ತು ಸಮರ್ಥಿಸುತ್ತದೆ.

ವ್ಯಕ್ತಿ ವಿಶಿಷ್ಟತೆ ಎನ್ನುವುದು ಸ್ವಾಯತ್ತತೆಯಂತೆಯೇ ಎಂದು ಹೇಳಲಾಗದು. ಆದರೆ ಅದಕ್ಕೂ ಶೈಕ್ಷಣಿಕ ಚರ್ಚೆಗಳಲ್ಲಿ ಬಹಳ ಮಹತ್ವವಿದೆ. ಕೆಲವು ಶೈಕ್ಷಣಿಕ ಸಂಶೋಧನೆಗಳಲ್ಲಿ ವಿಶ್ವಾತ್ಮಕ ನಿಯಮಗಳನ್ನು ಸ್ಥಾಪಿಸುವ ಹುಡುಕಾಟದಲ್ಲಿ ಅಥವಾ, ಕೊನೆಯ ಪಕ್ಷ, ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದಂತೆ ವಿಶಾಲವಾಗಿ ಅನ್ವಯಿಸುವ ಸಾಮಾನ್ಯ ಸೂತ್ರಗಳಲ್ಲಿ ಇಂತಹಾ ಅನನ್ಯತೆಯನ್ನು

ಅಧಿಕೃತಗೊಳಿಸುವ ಅವಶ್ಯಕತೆ ಇರುತ್ತದೆ. ಉದಾಹರಣೆಗೆ, ಇದನ್ನು ನೈಸರ್ಗಿಕ ವಿಜ್ಞಾನಿ ರಾಸಾಯನಿಕ, ಖನಿಜ ಅಥವಾ ಇತರೆ ವಿಷಯಗಳಲ್ಲಿ ಈ ರೀತಿಯ ಸಾಮಾನ್ಯ ಸೂತ್ರಗಳನ್ನು ಅಧಿಕೃತ ಗೊಳಿಸುತ್ತಿರುತ್ತಾನೆ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಅನನ್ಯ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಎರಡು ರಾಸಾಯನಿಕ ಪದಾರ್ಥಗಳನ್ನು ಬೆರೆಸಿದಾಗ ಸ್ಫೋಟಗೊಳ್ಳುತ್ತದೆ ಎಂಬುದನ್ನು ನಾನು ತೋರಿಸಿ ಕೊಟ್ಟರೆ ಅಂತಹದೇ ಸಂದರ್ಭಗಳಲ್ಲಿ ಅದು ಯಾವಗಲೂ ಸ್ಫೋಟಗೊಳ್ಳಲು ಕಾರಣವಾಗುತ್ತದೆ ಎನ್ನುವುದನ್ನು ನಾನು ನನ್ನ ವಿವೇಕದಿಂದ ತರ್ಕಿಸಬಹುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ಬೋಧನಾ ತಂತ್ರ ಒಂದು ತರಗತಿಯ ಮೇಲೆ ಒಂದು ರೀತಿಯ ಪರಿಣಾಮ ಬೀರುತ್ತದೆ ಎಂದರೆ ಬೇರೆ ಬೇರೆ ವ್ಯಕ್ತಿಗಳಿರುವ ಇನ್ನೊಂದು ತರಗತಿಯ ಮೇಲೂ ಅಂತಹದೇ ಪರಿಣಾಮ ಉಂಟು ಮಾಡುತ್ತದೆ ಎನ್ನುವ ತೀರ್ಮಾನ ಅಷ್ಟು ಸ್ಥಿರವಾದುದಲ್ಲ. (ಶಿಕ್ಷಣದಲ್ಲಿ ಅನುಭವಜನ್ಯ ಸಂಶೋಧನೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು 13ನೇ ವಿಭಾಗದಲ್ಲಿ ವಿವರವಾಗಿ ಪರಿಶೀಲಿಸಲಾಗುವುದು.)

ತಳಿಶಾಸ್ತ್ರದ ನಮ್ಮ ತಿಳುವಳಿಕೆಯನ್ನು ಪರಿಶೀಲಿಸಿದಾಗ ನಮಗೆ ಜಗತ್ತಿನಲ್ಲಿ ಶಿಕ್ಷಣವು ನಿಜವಾಗಿಯೂ ಬಹು ಮುಖ್ಯ ವಿಷಯ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅದನ್ನು ಸ್ಥೂಲವಾಗಿ ಮತ್ತು ಸರಳವಾಗಿ ಹೀಗೆ ವ್ಯಾಖ್ಯಾನಿಸಬಹುದು : ನಮ್ಮ ವಿಶಿಷ್ಟ ಬೌದ್ಧಿಕ ಸಾಮರ್ಥ್ಯವನ್ನು ಬೆಳೆಸುವಲ್ಲಿ ಯಾವುದು ಯಶಸ್ವಿಯಾಗುತ್ತದೆಯೋ ಅಥವಾ ಸೋಲುತ್ತದೆಯೋ ಶಿಕ್ಷಣವು ಅಂತಹಾ ಅನುಭವದ ಭಾಗವಾಗುತ್ತದೆ ; ಅಂತೆಯೇ ನಮ್ಮ ಮನಸ್ಸುಗಳು, ನಮ್ಮ ಮಾನವತ್ವ ಮತ್ತು ಹಾಗಾಗಿ ನಮ್ಮ ಸ್ವಾಯುತ್ತತೆಗಳಿಗೂ ಇದೇ ಮಾತೇ ಅನ್ವಯಿಸುತ್ತದೆ. ಮನುಷ್ಯರನ್ನು ಮಾತ್ರ ಶಿಕ್ಷಣವಂತರನ್ನಾಗಿ ಮಾಡಬಹುದು. ಕೆಲವು ರೀತಿಯ ಶಿಕ್ಷಣದ ಮೂಲಕ ಮಾತ್ರ ನಮ್ಮ ವೈಯಕ್ತಿಕ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು. ಶಿಕ್ಷಣದ ಪರಿಕಲ್ಪನೆಯನ್ನೇ ವಿವರವಾಗಿ ಪರಿಶೀಲಿಸುವ ಕಾಲ ಈಗ ಕೂಡಿ ಬಂದಿದೆ.

**ಟಿಪ್ಪಣಿ :**

1. ವಾಷೂ (ಘಚಿಷಔಜ) ಚಿಂಪಾಂಜಿ ಮತ್ತು ಕಪಿ ಜಾತಿಗಳ (ಂಥಿಜ) ಸಂಶೋಧನೆಗಳಿಗೆ ಇದನ್ನು ನೋಡಿ : ಪಾವೊಲಾ ಕೆವಲೀರಿ ಮತ್ತು ಪೀಟರ್‌ಸಿಂಗರ್ ಸಂಪಾದಿಸಿರುವ ***ದಿ ಗ್ರೇಟ್ ಏಪ್ ಪ್ರಾಜೆಕ್ಟ್ : ಈಕ್ವಾಲಿಟಿ ಬಿಯಾಂಡ್ ಹುಮ್ಯಾನಿಟಿ*** (ನಾಲ್ಕನೇ ಸ್ಥಾನ 1993). ಕಂಪ್ಯೂಟರ್‌ಗಳು ಮತ್ತು ಮನಸ್ಸುಗಳ ಅಧ್ಯಯನಕ್ಕಾಗಿ ನೋಡಿ : ಜಾನ್ ಸೀಯರ್ಲೆ, ***ಮೈಂಡ್ಸ್, ಬ್ರೈನ್ಸ್ ಮತ್ತು ಸೈನ್ಸ್,*** (ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್, 1984)

**ಹೆಚ್ಚಿನ ಓದಿಗಾಗಿ :**

ಇತ್ತೀಚಿನ ತಳಿ ಶಾಸ್ತ್ರ ಸಂಶೋಧನೆಗೆ ಮುಖ್ಯ ಪಠ್ಯ : ಮ್ಯಾಟ್ ರಿಡ್ಲೆಯವರ ***'ನೇಚರ್ ವಾಯಾ ನರ್ಚರ್'.*** ಈ ಪುಸ್ತಕದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ತೀರಾ ಭಿನ್ನವಾದ ದೃಷ್ಟಿಕೋನ ಹೊಂದಿರುವ ಪುಸ್ತಕ ಜಾನ್ ಗ್ರೆಯವರ ***ಸ್ಟ್ರಾ ಡಾಗ್ಸ್*** (ಲಂಡನ್, ಗ್ರಂಟ 2002). ಭಿನ್ನ ಮಜಲುಗಳಲ್ಲಿ ಭೌತಿಕ ದೃಷ್ಟಿಕೋನದಿಂದ ಮನಸ್ಸಿಗೆ ಸಂಬಂಧಿಸಿದ ಗ್ರಂಥಗಳು ರಾಡ್ನಿ ಕಾಟರಿಲ್‌ರವರ ***ನೊ ಘೋಸ್ಟ್ ಇನ್ ದಿ ಮಶಿನ್*** (ಲಂಡನ್, ಹೀನ್‌ಮನ್, 1989), ಸ್ಟಿವನ್ ಪಿಂಕರ್‌ರವರ ***ದಿ ಬ್ಲಾಂಕ್ ಸ್ಲೇಟ್*** (ನ್ಯೂಯಾರ್ಕ್, ವೈಕಿಂಗ್, 2002), ಮತ್ತು ಆಂಟೋನಿಯೊ ಡಮಾಸಿಯಾ ರವರ ***ಲುಕಿಂಗ್ ಫಾರ್ ಸ್ಪಿನೋಜ*** (ಟೊರೊಂಟೊ, ಹಾರ್‌ಕೋರ್ಟ್, 2003). ನೋಡಿ ರೈನರ್ ಬಾರ್ನ್ (ಸಂಪಾದಿತ) ***ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ : ದಿ ಕೇಸ್ ಎಗೆನಸ್ಟ್*** (ಲಂಡನ್, ಕ್ರೂಮ್‌ಹೆಲ್ಮ್, 1987), ಜೆ. ಝಡ್. ಯೂಂಗ್‌ರವರ ***ಫಿಲಾಸಫಿ ಅಂಡ್ ದಿ ಬ್ರೈನ್*** (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1987), ರಾಬಿನ್ ಬ್ಯಾರೊರವರ ***ಲಾಂಗ್ವೇಜ್, ಇಂಟೆಲಿಜೆನ್ಸ್ ಅಂಡ್ ಥಾಟ್*** (ಸಸ್ಸೆಕ್ಸ್, ಎಡ್ವರ್ಡ್ ಎಲ್ಗಾರ್, 1993) ಮತ್ತು ಜಾನ್ ಸಿಯರ್ಲೆಯವರ ***ಮೈಂಡ್*** (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 2004).